**ಪತ್ರಿಕಾ ಪ್ರಕಟಣೆ**

ವಿಜಯಪುರ

ದಿನಾಂಕ: 15.09.2021.

**1] ಸಿಂದಗಿ ಪೊಲೀಸ ಠಾಣೆ ಗುನ್ನೆ ನಂ: 256/2021 ಕಲಂ: 279, 337, 304 (ಎ) ಐಪಿಸಿ**

ದಿನಾಂಕ: 14.09.2021 ರಂದು 05:30 ಗಂಟೆಯ ಸುಮಾರಿಗೆ ಇದರಲ್ಲಿಯ ಆರೋಪಿತರಾದ 1] ಮೃತ ರವಿ ತಂದೆ ವಾರೆಪ್ಪ ಬಣಗಾರ ವಯಾ 25 ವರ್ಷ ಜಾತಿ ಹಿಂದೂ ತಳವಾರ ಸಾ: ಅಗಸಬಾಳ ತಾ: ಬ.ಬಾಗೇವಾಡಿ ಜಿಲ್ಲಾ ವಿಜಯಪೂರ ಲಾರಿ ನಂಬರ ಕೆಎ: 28 ಡಿ: 3199 ನೇದ್ದರ ಚಾಲಕ. 2] ಮೃತ ಆದಮ್ ಶಫಿ ತಂದೆ ನಾಗೂರ ಶೇಖ ವಯಾ 52 ವರ್ಷ ಸಾ: ಪಾಥರೆಡ್ಡಿಪಾಲಂ ತಾ: ಚೇಬ್ರಲ್ ಜಿ: ಗುಂಟೂರ ಆಂದ್ರ ಪ್ರದೇಶ ಲಾರಿ ನಂಬರ ಎಪಿ: 21 ಎಕ್ಸ್: 7759 ನೇದ್ದರ ಚಾಲಕ ರವಿ ಈತನು ತಾನು ನಡೆಸುತಿದ್ದ ಲಾರಿ ನೇದ್ದರಲ್ಲಿ ಕರಾಡದಲ್ಲಿ ಸಕ್ಕರೆ ಲೋಡ ಮಾಡಿಕೊಂಡು ವಿಜಯಪೂರ-ಜೇವರ್ಗಿ ಎನ್.ಎಚ್ 50 ಮಾರ್ಗವಾಗಿ ಯಾದಗೀರಿಗೆ ಹೋಗುವಾಗ ಸಿಂದಗಿ ದಾಟಿ ಹೋಗುವಾಗ ಯರಗಲ್ ಯು.ಕೆ.ಪಿ ಕ್ಯಾಂಪ ಹತ್ತಿರ ಲಾರಿಯನ್ನು ನಿಸ್ಕಾಳಜಿಯಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ಅತೀ ಜೋರಾಗಿ ನಡೆಯಿಸುತ್ತಾ ಹೋಗಿ, ಎದುರಿಗೆ ಲಾರಿ ನಂಬರ ಎಪಿ: 21 ಎಕ್ಸ್: 7759 ನೇದ್ದರ ಚಾಲಕನಾದ ಆದಮ್ ಶಫಿ ತಂದೆ ನಾಗೂರ ಶೇಖ ವಯಾ 52 ವರ್ಷ ಸಾ: ಪಾಥರೆಡ್ಡಿಪಾಲಂ ತಾ: ಚೇಬ್ರಲ್ ಜಿ: ಗುಂಟೂರ ಆಂದ್ರ ಪ್ರದೇಶ ಈತನು ತಾನು ನಡೆಸುತಿದ್ದ ಲಾರಿಯನ್ನು ನಿಸ್ಕಾಳಜಿಯಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ಅತೀ ಜೋರಾಗಿ ನಡೆಯಿಸುತ್ತಾ ಹೊರಟು ಮುಂದೆ ಹೊರಟ ಲಾರಿಗೆ ಓವರ ಟೇಕ ಮಾಡಿಕೊಂಡು ಹೋಗಿ ಎದುರಿಗೆ ರವಿ ಈತನು ನಡೆಯಿಸಿಕೊಂಡು ಬರುತಿದ್ದ ಲಾರಿ ನೇದ್ದಕ್ಕೆ ಎದುರುಬದುರಾಗಿ ಹಾಯಿಸಿ ಅಪಘಾತ ಪಡಿಸಿ ಎರಡೂ ವಾಹನಗಳ ಚಾಲಕರು ಭಾರಿ ಗಾಯ ಪೆಟ್ಟು ಹೊಂದಿ ಲಾರಿ ನೇದ್ದರಲ್ಲಿ ಇದ್ದ ಇನ್ನೊಬ್ಬನಿಗೆ ಸಾದಾ ಗಾಯ ಪೆಟ್ಟು ಪಡಿಸಿದ್ದು, ನಮ್ಮ ತಮ್ಮ ರವಿ ಈತನಿಗೆ ಸಿಂದಗಿ ಸರಕಾರಿ ದವಾಖಾನೆಗೆ ಕರೆದುಕೊಂಡು ಬಂದು ಉಪಚಾರ ಮಾಡಿಸಿ ಹೆಚ್ಚಿನ ಉಪಚಾರ ಕುರಿತು ವಿಜಯಪೂರದ ಭಾಗ್ಯವಂತಿ ಆಸ್ಪತ್ರೆಯಲ್ಲಿ ದಾಖಲ ಮಾಡಿದ್ದು ನಮ್ಮ ತಮ್ಮ ರವಿ ಈತನು ಉಪಚಾರ ಹೊಂದುವಾಗ ಉಪಚಾರ ಫಲಿಸದೇ ಬೆಳಿಗ್ಗೆ 09:45 ಮೃತ ಪಟ್ಟಿದ್ದು ಇರುತ್ತದೆ. ಮತ್ತು ಲಾರಿ ನಂಬರ ಎಪಿ: 21 ಎಕ್ಸ್: 7759 ನೇದ್ದರ ಚಾಲಕ ಆದಮ್ ಶಫಿ ಶೇಖ ನಾಗೂರ ಈತನಿಗೆ ಉಪಚಾರ ಕುರಿತು ಸಿಂದಗಿ ಸರಕಾರಿ ದವಾಖಾನೆಯಲ್ಲಿ ಹಾಕುವಾಗ ಮೃತ ಪಟ್ಟಿದ್ದು ಇರುತ್ತದೆ. ಈ ಬಗ್ಗೆ ಮಲ್ಲಪ್ಪ ವಾರೆಪ್ಪ ಬಣಗಾರ. ಸಾ; ಅಗಸಬಾಳ ತಾ: ಬ.ಬಾಗೇವಾಡಿ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 14.09.2021 ರಂದು ಸಿಂದಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ತಿಕೋಟಾ ಪೊಲೀಸ ಠಾಣೆ ಗುನ್ನಾ ನಂ: 141/2021 ಕಲಂ: 78(3) ಕೆ.ಪಿ. ಆ್ಯಕ್ಟ್**

ದಿನಾಂಕ: 14.09.2021 ರಂದು 14:10 ಗಂಟೆಯ ಸುಮಾರಿಗೆ ಇದರಲ್ಲಿಯ ಆರೋಪಿತರಾದ 1) ಸಂಜು ಸಿದ್ರಾಮ ಕಾಂಬಳೆ ಸಾ॥ –ಘೋಣಸಗಿ 2) ಮುಕುಂದ ರಾಮಣ್ಣ ಹರಿಜನ ಸಾ॥ ಕಳ್ಳಕವಟಗಿ ಇವರು ಕಳ್ಳಕವಟಗಿ ಗ್ರಾಮದಲ್ಲಿ ಸರಕಾರದಿಂದಾಗಲಿ ವ ಸಂಭಂದಪಟ್ಟ ಯಾವುದೇ ಪ್ರಾಧಿಕಾರದಿಂದ ಪರವಾನಿಗೆ ವ ಪರ್ಮಿಟ್ ಇಲ್ಲದೇ ಅನಧಿಕೃತವಾಗಿ ಅವರ ಸ್ವಂತ ಲಾಭಕ್ಕಾಗಿ ತಮ್ಮ ಫಾಯಿದೆಗೊಸ್ಕರ ಅಂಕಿ ಸಂಖ್ಯೆಗಳ ಮೇಲೆ 1 ರೂಪಾಯಿಗೆ 80 ರೂಪಾಯಿ ಕೊಡುವ ಕರಾರಿನ ಮೇಲೆ ಸಾರ್ವಜನಿಕ ಸ್ಥಳದಲ್ಲಿ ಕೂತು ಕಲ್ಯಾಣ ಮಟಕಾ ಎಂಬ ಓ.ಸಿ. ಮಟಕಾ ಜೂಜಾಟ ನಡೆಸುವಾಗ ಸಿಕ್ಕಿದ್ದು, ಈ ಬಗ್ಗೆ ಸ:ತ: ಅನೀತಾ ರಾಠೋಡ ಮ.ಪಿ.ಎಸ್.ಐ. ತಿಕೋಟಾ ಪೊಲೀಸ್ ಠಾಣೆ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 14.09.2021 ರಂದು ತಿಕೋಟಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ಚಡಚಣ ಪೊಲೀಸ ಠಾಣೆ ಗುನ್ನೆ ನಂ: 90/2021 ಕಲಂ: 32. 34 ಕೆ.ಇ. ಆ್ಯಕ್ಟ್.**

ದಿನಾಂಕ: 14.09.2021 ರಂದು ಮುಂಜಾನೆ: 11.15 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ ಜಯಭೀಮ ಅಶೋಕ ಕಟ್ಟಿಮನಿ ಸಾ॥ ಬರಡೋಲ್ ದೊಡ್ಡಿ ರಸ್ತೆ, ಅಂಬೇಡ್ಕರ್ ಕಾಲೋನಿ ತಾ॥ ಚಡಚಣ ಈತನು ಬರಡೋಲ ಗ್ರಾಮದ ತನ್ನ ಬಾಬತ್ತ ಕಿರಾಣಿ ಅಂಗಡಿಯ ಹತ್ತಿರ ಖುಲ್ಲಾ ಸಾರ್ವಜನಿಕ ಜಾಗೆಯಲ್ಲಿ ಕುಳಿತುಕೊಂಡು ಅಕ್ರಮವಾಗಿ ಸರಾಯಿ ಮಾರಾಟ ಮಾಡುತ್ತಿರುವಾಗ ಸಿಕ್ಕ ಅಪರಾಧ. ಈ ಬಗ್ಗೆ ಸ:ತ: ಎಚ್.ಎಸ್.ಶಿವಪೂರ ಎಎಸ್ಐ, ಚಡಚಣ ಪಿಎಸ್. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 14.09.2021 ರಂದು ಚಡಚಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.